## ಮಕ್ಕಳ ಕೈಗೆ ಮೊಬೈಲು

7

ಟೀವಿ ಮತ್ತು ಮೊಬೈಲ್‌ನಿಂದ ಮಕ್ಕಳನ್ನು ದೂರವಿಡಲು ಬಯಸುತ್ತಿದ್ದ ಪೋಷಕರು, ಮಕ್ಕಳ ಕೈಗೆ ಮೊಬೈಲ್ ಒಪ್ಪಿಸಿ ಕೂರುವ ಸನ್ನಿವೇಶವನ್ನು ಲಾಕ್‌ಡೌನ್ ಸೃಷ್ಟಿಸಿತು. ಶಾಲೆಗಳು ಬಾಗಿಲು ಮುಚ್ಚಿದ್ದರಿಂದಾಗಿ, ಪರ್ಯಾಯ ಶಿಕ್ಷಣದ ರೂಪದಲ್ಲಿ ಖಾಸಗಿ ಶಾಲೆಗಳಿಂದ 'ಆನ್‌ಲೈನ್ ತರಗತಿ'ಗಳು ಆರಂಭವಾದವು.

ಆನ್‌ಲೈನ್ ಮೂಲಕ ವಿದ್ಯಾರ್ಥಿಗಳೊಂದಿಗೆ ಸಂವಹನ ನಡೆಸುವ ಸವಾಲಿಗೆ ಶಿಕ್ಷಕರು ಒಡ್ಡಿಕೊಳ್ಳಬೇಕಾಯಿತು. ಪಾಠ, ಹೋಂವರ್ಕ್, ಪರೀಕ್ಷೆ ಎಲ್ಲವೂ ಡಿಜಿಟಲ್ ಸ್ವರೂಪ ಪಡೆದು, 'ಮೊಬೈಲ್'ಗೆ ಶಾಲೆಯ ಸ್ವರೂಪವೂ ದೊರೆಯಿತು. ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಹಳೆಯ–ಹೊಸ ಸ್ಮಾರ್ಟ್ ಫೋನ್‌ಗಳನ್ನು ಒದಗಿಸಿಕೊಡುವ ಅಭಿಯಾನಗಳು ರಾಜ್ಯದ ವಿವಿಧ ಭಾಗಗಳಲ್ಲಿ ನಡೆದವು.

ಖಾಸಗಿ ಶಾಲೆಯ ಮಕ್ಕಳು ಆನ್‌ಲೈನ್ ಶಿಕ್ಷಣದ ಮೂಲಕ ತಕ್ಕಮಟ್ಟಿಗೆ ಕಲಿಕೆಯಲ್ಲಿ ತೊಡಗಿದ್ದರೆ, ಸರ್ಕಾರಿ ಶಾಲೆಗಳ ಮಕ್ಕಳನ್ನು 'ವಿದ್ಯಾಗಮ' ಯೋಜನೆಯ ಮೂಲಕ ಸಕ್ರಿಯವಾಗಿರಿಸಲು ಸರ್ಕಾರ ಪ್ರಯತ್ನಿಸಿತು. ಉದ್ಯಾನ, ದೇಗುಲಗಳ ಆವರಣ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಮರಗಳ ನೆರಳಿನಲ್ಲಿ ಮಕ್ಕಳನ್ನು ಒಟ್ಟು ಮಾಡಿಕೊಂಡು ಶಿಕ್ಷಕರು ಪಾಠ ಹೇಳತೊಡಗಿದರು. ಆದರೆ, ಕೆಲವು ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಸೋಂಕು ಕಾಣಿಸಿಕೊಂಡಿದ್ದರಿಂದಾಗಿ ಉಂಟಾದ ಸಾರ್ವಜನಿಕ ಪ್ರತಿರೋಧದಿಂದ 'ವಿದ್ಯಾಗಮ' ಯೋಜನೆ ಸ್ಥಗಿತಗೊಂಡಿತು. 2021ರ ಜನವರಿಯಿಂದ ಸುರಕ್ಷಿತ ಕ್ರಮಗಳನ್ನು ಅನುಸರಿಸಿ, ಶಾಲಾ ಆವರಣಗಳಲ್ಲಿ 'ವಿದ್ಯಾಗಮ' ಯೋಜನೆಯನ್ನು ಪುನಃ ಆರಂಭಿಸಲು ಸರ್ಕಾರ ನಿರ್ಧರಿಸಿದೆ. ■



ದಾವಣಗೆರೆಯ ಶಾಲೆಯೊಂದರಲ್ಲಿ ಎಸ್.ಎಸ್.ಎಲ್ ಸಿ ಪರೀಕ್ಷೆ ನಂತರ ವಿದ್ಯಾರ್ಥಿಗಳು ಸಾಮಾಜಿಕ ಅಂತರ ಕಾಯ್ದುಕೊಂಡು ನಿರ್ಗಮಿಸುತ್ತಿರುವುದು

**ಕೊರೊನಾ ಸೋಂಕು ಪ್ರಸರಣದ ಆತಂಕದಿಂದಾಗಿ ದೇಶದ ವಿವಿಧ ಭಾಗಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ನಡೆಯಲಿಲ್ಲ. ಆದರೆ, ಕರ್ನಾಟಕ ಸರ್ಕಾರ ಮಾತ್ರ ಸುರಕ್ಷಿತ ಕ್ರಮಗಳನ್ನು ಅನುಸರಿಸಿ ಎಸ್ಸೆಸ್ಸೆಲ್ಸಿ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿದ್ದು ಮತ್ತು ಅಪೂರ್ಣಗೊಂಡಿದ್ದ ಪಿಯುಸಿ ಪರೀಕ್ಷೆಯನ್ನೂ ಪೂರೈಸಿದ್ದು ದೇಶದ ಶೈಕ್ಷಣಿಕ ಇತಿಹಾಸದಲ್ಲೇ ಅಪೂರ್ವ ವಿದ್ಯಮಾನ.**




ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರ ಮನೆಗೆ ಕ್ವಾರಂಟೈನ್ ಪೋಸ್ಟರ್ ಅಂಟಿಸುತ್ತಿರುವ ಆರೋಗ್ಯ ಇಲಾಖೆ ಕಾರ್ಯಕರ್ತರು

## ಆರೈಕೆ–ಸುಲಿಗೆಯ 'ಕ್ವಾರಂಟೈನ್'

8

ಕೊರೊನಾ ಸೋಂಕಿಗೆ ಒಳಗಾದವರನ್ನು ಅಥವಾ ಶಂಕಿತರನ್ನು ಸಮಾಜದ ಮುಖ್ಯವಾಹಿನಿಯಿಂದ ಪ್ರತ್ಯೇಕವಾಗಿರಿಸುವ 'ಕ್ವಾರಂಟೈನ್' ಕೇಂದ್ರಗಳು ಆರಂಭವಾದುದು ಕೊರೊನಾ ಕಾಲಘಟ್ಟದ ಪ್ರಮುಖ ವಿದ್ಯಮಾನಗಳಲ್ಲೊಂದು.

ಆಸ್ಪತ್ರೆಗಳೆಲ್ಲ ಕೋವಿಡ್ ಕೇರ್ ಮತ್ತು ಕ್ವಾರಂಟೈನ್ ಕೇಂದ್ರಗಳಾದವು. ಹೋಟೆಲ್‌ಗಳನ್ನು, ಸಮುದಾಯ ಭವನಗಳನ್ನು ಕ್ವಾರಂಟೈನ್ ಸೆಂಟರ್‌ಗಳಾಗಿ ಬಳಸಿಕೊಳ್ಳಲಾಯಿತು. ಬೆಂಗಳೂರಿನಲ್ಲಿ ಹತ್ತು ಸಾವಿರ ಮಂದಿಯನ್ನು ಉಪಚರಿಸಬಹುದಾದ ಕೋವಿಡ್ ಕೇರ್ ಕೇಂದ್ರ ತುಮಕೂರು ರಸ್ತೆಯ 'ಬೆಂಗಳೂರು ವಸ್ತು ಪ್ರದರ್ಶನ ಮೈದಾನ'ದಲ್ಲಿ ಆರಂಭವಾಯಿತು. ಹಾಸಿಗೆ, ಮಂಚಗಳನ್ನು ಬಾಡಿಗೆಗೆ ಪಡೆಯುವ ಹಗರಣದೊಂದಿಗೆ ಪ್ರಾರಂಭವಾದ ಈ ಶುಶ್ರೂಷಾಕೇಂದ್ರ ಆರಂಭವಾದ ಕೆಲವೇ ದಿನಗಳಲ್ಲಿ ಸದ್ದಿಲ್ಲದೆ ಸ್ಥಗಿತಗೊಂಡಿತು.

ಕೊರೊನಾ ಸೋಂಕಿತರ ಮನೆಗಳನ್ನು ಹಾಗೂ ಆ ಮನೆಗಳ ಬೀದಿಗಳನ್ನು ಸೀಲ್‌ಡೌನ್ ಮಾಡುವ ಮೂಲಕ 'ನಾಗರಿಕ ಅಸ್ಪೃಶ್ಯತೆ'ಯ ವಿಧಾನವೊಂದು ಅನಾವರಣಗೊಂಡಿತು. ವೈಜ್ಞಾನಿಕ ನೆಲೆಗಟ್ಟಿಲ್ಲದೆ ಬೇಕಾಬಿಟ್ಟಿಯಾಗಿ ನಡೆದ ಈ ಸೀಲ್‌ಡೌನ್ ಕಾರ್ಯಕ್ರಮಗಳು ಜನರಲ್ಲಿ ಆತಂಕವನ್ನೂ ವ್ಯವಸ್ಥೆಯ ಬಗೆಗೆ ಭ್ರಮನಿರಸನವನ್ನೂ ಮೂಡಿಸಿದವು. ■